ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಇ-ಆಡಳಿತ ಶಿಕ್ಷಕರ ಮಾಹಿತಿ 01/2017-18

ದಿನಾಂಕ: 07.12.2017

## ಸುತ್ತೋಲೆ

ವಿಷಯ: **Teacher's Data Software** ತಂತ್ರಾಂಶದಲ್ಲಿ ಅಳವಡಿಸಿರುವ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸೇವಾ ಮಾಹಿತಿಗಳನ್ನು ಪರಿಶೀಲಿಸಿ ದೃಢೀಕರಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ: 08.09.2017 23.10.2017 ಹಾಗೂ 20.11.2017

ಉಲ್ಲೇಖಿತ ಈ ಕಛೇರಿಯ ಸುತ್ತೋಲೆ ಹಾಗೂ ಪತ್ರಗಳಲ್ಲಿ ಪ್ರಸ್ತಾಪಿಸಿದಂತೆ, ಜಿಲ್ಲಾ ಉಪನಿರ್ದೇಶಕರು (ಆಡಳಿತ) ಇವರ ಲಾಗಿನ್‌ನಲ್ಲಿ ಬ್ಲಾಕ್‌ವಾರು ಪ್ರತಿ ಶಿಕ್ಷಕರ ಮಾಹಿತಿಯನ್ನು ಆಯ್ಕೆ ಮಾಡಿ ಪರಿಶೀಲಿಸಿಕೊಂಡು, ಜಿಲ್ಲಾ ಉಪನಿರ್ದೇಶಕರ ಹಂತದಲ್ಲಿ **TDS** ತಂತ್ರಾಂಶದಲ್ಲಿ ಅನುಮೋದಿಸಲು ತಿಳಿಸಲಾಗಿತ್ತು.

- ಎಲ್ಲಾ ಉಪನಿರ್ದೇಶರು(ಆಡಳಿತ) ಮತ್ತು ಉಪನಿರ್ದೇಶರು(ಅಭಿವೃದ್ಧಿ) ಇವರು ತಮಗೆ ಸಂಬಂಧಿಸಿದ ಕಛೇರಿ/ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲಾ ಶಿಕ್ಷಕರು, ಬಿಆರ್‌ಪಿ, ಸಿಆರ್‌ಪಿ, ಇಸಿಓ, ತಾಂತ್ರಿಕ ಸಹಾಯಕರನ್ನು ಒಳಗೊಂಡಂತೆ ಎಲ್ಲಾ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ, ಸರ್ಕಾರಿ ಪ್ರೌಢಶಾಲಾ ಶಿಕ್ಷಕರ ವೃಂದದ ಹಾಗೂ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಸೇವಾ ಮಾಹಿತಿಗಳನ್ನು **TDS** ತಂತ್ರಾಂಶದಲ್ಲಿ ಅಳವಡಿಸಲಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
- ಡಯಟ್ , ಸಿ.ಟಿ.ಇ., ಟಿ.ಟಿ.ಐ.ಗಳಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲಾ ಶಿಕ್ಷಕರು ಮತ್ತು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದವರು ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅವರ ಮಾಹಿತಿಯನ್ನೂ **TDS** ತಂತ್ರಾಂಶದಲ್ಲಿ ಅಳವಡಿಸಿರುವ ಬಗ್ಗೆ ಹಾಗೂ ಅನುಮೋದನೆ**(Approve)** ಯಾಗಿರುವ ಬಗ್ಗೆ ಡಯಟ್, ಸಿ.ಟಿ.ಇ, ಟಿ.ಟಿ.ಐ ಗಳ ಪ್ರಾಂಶುಪಾಲರುಗಳೇ ಖಾತ್ರಿಪಡಿಸಿಕೊಳ್ಳತಕ್ಕದ್ದು.
- ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲಾ ಶಿಕ್ಷಕರು ಮತ್ತು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯಾವುದೇ ನೌಕರರ ಮತ್ತು ಅಧಿಕಾರಿಗಳ ಮಾಹಿತಿಯು **TDS** ತಂತ್ರಾಂಶದಲ್ಲಿ ಅಳವಡಿಸದಿದ್ದಲ್ಲಿ ಅಯಾ ಡಿ.ಡಿ.ಓ.ಗಳನ್ನು ಮತ್ತು ಜಿಲ್ಲಾ ಉಪನಿರ್ದೇಶಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಮತ್ತು ಡಿಸೆಂಬರ್ 2017ರ ವೇತನ ತಡೆಗೆ ಶಿಫಾರಸ್ಸು ಮಾಡಲಾಗುವುದು.
- ಜಂಟಿ ನಿರ್ದೇಶಕರು(ಶಾಲಾ ಶಿಕ್ಷಣ), ಆಯುಕ್ತರ ಕಛೇರಿ ಇವರು ಇಲಾಖೆಯ ವಿವಿಧ ಕಛೇರಿಗಳಾದ ಆಯುಕ್ತರ ಕಛೇರಿ, ಸರ್ವ ಶಿಕ್ಷಣ ಅಭಿಯಾನ, ಕೆಎಸ್.ಇ.ಇ.ಬಿ, ಡಿ.ಎಸ್.ಇ.ಆರ್.ಟಿ, ಎಂ.ಎಂ.ಎಸ್, ಟಿ.ಬಿ.ಎಫ್ ಕಛೇರಿ, ವಿಭಾಗೀಯ ಜಂಟಿ ನಿರ್ದೇಶಕರ ಕಛೇರಿಗಳನ್ನು ಒಳಗೊಂಡಂತೆ ಎಲ್ಲಾ ಕಛೇರಿಗಳಲ್ಲಿನ ಮೇಲ್ಕಂಡ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಮಾಹಿತಿಯನ್ನು **TDS** ತಂತ್ರಾಂಶದಲ್ಲಿ ಅಳವಡಿಸಿರುವ ಬಗ್ಗೆ ಪರಿಶೀಲಿಸುವುದು.

- ಉಪನಿರ್ದೇಶಕರು ಎಲ್ಲಾ ಶಿಕ್ಷಕರ ಮಾಹಿತಿಯನ್ನು ಪರಿಶೀಲಿಸಿ ಕಡ್ಡಾಯವಾಗಿ ಅನುಮೋದನೆ(Approve) ಮಾಡುವುದು.
- ಶಿಕ್ಷಕರಿಂದ ಒಪ್ಪಿಗೆಯಾದ(Agree) ಮಾಹಿತಿಯನ್ನು ಹಾಗೂ ಶಿಕ್ಷಕರಿಂದ Disagree ಯಾದ ಮಾಹಿತಿಯನ್ನು ಸೂಕ್ತ ದಾಖಲೆಗಳೊಂದಿಗೆ ಪರಿಶೀಲಿಸಿ ತಂತ್ರಾಂಶದಲ್ಲಿ Update ಮಾಡಿದ ನಂತರ ಮಾಹಿತಿಯನ್ನು(Publish) ಪ್ರಕಟಿಸುವುದು.

ಮೇಲ್ಕಂಡ ಎಲ್ಲಾ ಪ್ರಕ್ರಿಯೆಯನ್ನು ತುರ್ತಾಗಿ ಪೂರ್ಣಗೊಳಿಸಲು ಸೂಚಿಸಿದೆ. ಈಗಾಗಲೇ ಈ ರೀತಿ ಉಪನಿರ್ದೇಶಕರಿಂದ ಅನುಮೋದನೆಯಾಗಿ (Approve) ಶಿಕ್ಷಕರ ಒಪ್ಪಿಗೆ (Agree) ಪಡೆದು, ತಂತ್ರಾಂಶದಲ್ಲಿ ಪ್ರಕಟಿಸಿದ ನಂತರವೂ ಕೆಲವು ಶಿಕ್ಷಕರ ಮಾಹಿತಿಯಲ್ಲಿ ಕೆಲವೊಂದು ಬದಲಾವಣೆ ಅಥವಾ ಸೇರ್ಪಡೆ ಮಾಡಬೇಕಾದ ಪ್ರಕರಣಗಳು ಕಂಡುಬಂದಿದೆ.

ಆದ್ದರಿಂದ ಪ್ರತೀ ಉಪನಿರ್ದೇಶಕರು(ಆಡಳಿತ) ಶಿಕ್ಷಕರ ತಂತ್ರಾಂಶದಲ್ಲಿ ಸರಿಪಡಿಸಬೇಕಾದ ಮಾಹಿತಿಗಳನ್ನು ಸಂಬಂದಪಟ್ಟ ಡಿ.ಡಿ.ಓ. ಗಳಿಂದ ದೃಡಿಕರಣ ಪಡೆದು, ಕ್ರೋಡೀಕರಿಸಿ ಸರ್ಕಾರಿ ಪ್ರಾಥಮಿಕಶಾಲಾ ಶಿಕ್ಷಕರ ಮಾಹಿತಿಯನ್ನು **ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)** ಇವರಿಗೆ ಹಾಗೂ ಪ್ರೌಢಶಾಲಾ ಶಿಕ್ಷಕರ ಮಾಹಿತಿಗಳನ್ನು **ನಿರ್ದೇಶಕರು(ಪ್ರೌಢ ಶಿಕ್ಷಣ)** ಇವರಿಗೆ ತಪ್ಪದೇ ಕಳುಹಿಸಲು ಈ ಮೂಲಕ ಸೂಚಿಸಿದೆ. ಸದರಿ ಪಟ್ಟಿಗಳಲ್ಲಿನ ಮಾಹಿತಿಯನ್ನು ಸಂಬಂದಪಟ್ಟ ನಿರ್ದೇಶಕರುಗಳು ಅನುಮೋದಿಸಿದ ನಂತರ TDS ಶಿಕ್ಷಕರ ಮಾಹಿತಿ ತಂತ್ರಾಂಶದಲ್ಲಿ ಸರಿಪಡಿಸಲಾಗುವುದು. ಯಾವುದೇ ಕಾರಣಕ್ಕೂ ಶಿಕ್ಷಕರು ಅಥವಾ ಡಿಡಿಓಗಳು ಆಯುಕ್ತರ ಕಛೇರಿಯನ್ನು ನೇರವಾಗಿ ಸಂಪರ್ಕಿಸಲು ಅವಕಾಶ ನೀಡದೇ ಉಪನಿರ್ದೇಶಕರು (ಆಡಳಿತ) ಈ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಿದೆ. **TDS** ತಂತ್ರಾಂಶದಲ್ಲಿ ಅಳವಡಿಸಿರುವ ಮಾಹಿತಿಯನ್ನು ನೇರವಾಗಿ ಶಿಕ್ಷಕರ ವರ್ಗಾವಣೆಗೆ ಬಳಸಲಾಗುತ್ತಿರುವುದರಿಂದ ಈ ಬಗ್ಗೆ ಗಂಬೀರವಾಗಿ ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

(ಡಾ: ಪಿ.ಸಿ. ಜಾಫರ್)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಇವರಿಗೆ ಮಾಹಿತಿಗಾಗಿ
2. ಅಪರ ಆಯುಕ್ತರು, ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
3. ಅಪರ ಆಯುಕ್ತರು, ದಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
4. ನಿರ್ದೇಶಕರು(ಪ್ರೌಡ ಶಿಕ್ಷಣ), ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ನಿರ್ದೇಶಕರು(ಮೈನಾರಿಟಿ), ನಿರ್ದೇಶಕರು(ಕೆ ಎಸ್ ಇ ಇ ಬಿ), ನಿರ್ದೇಶಕರು(ಇತರೆ ಪರೀಕ್ಷೆಗಳು), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
5. ನಿರ್ದೇಶಕರು(ಡಿ.ಎಸ್.ಇ.ಆರ್.ಟಿ) ಇವರಿಗೆ ಡಯಟ್, ಸಿಟಿಇ ಮತ್ತು ಟಿಟಿಐ ಗಳಿಗೆ ಸೂಕ್ತ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಗಾಗಿ.
6. ಜಂಟಿ ನಿರ್ದೇಶಕರು (ಶಾಲಾ ಶಿಕ್ಷಣ)ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
7. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಇವರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
8. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
9. ಕಛೇರಿ ಪ್ರತಿ.